
ಹೊಳೆ ದಾಟುತ್ತಿದ್ದರು. ಅವರು ಹೈಸ್ಕೂಲಿಗೆ ಬರುವ ಹೊತ್ತಿಗೆ, ಹೊಳೆಗಳ ದಡಗುಂಟ ಹಯಾಸಿಂಥ್ ಹೆಸರಿನ ಜಲಕಳೆಗಳು ಬೆಳೆಯಲು ಶುರುವಾಗಿತ್ತು. ಅದನ್ನು ಈಗಲೇ ಬುಡಸಮೇತ ನಾಶ ಮಾಡದಿದ್ದರೆ ಮುಂದೊಂದು ದಿನ ಇಡೀ ಹೊಳೆಯನ್ನೇ ಅದು ನುಂಗಿ ಹಾಕುವ ಬಗ್ಗೆ ಆತಂಕವನ್ನೂ, ಆ ಕುರಿತ ಸರಕಾರಿ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಅಸಮಾಧಾನವನ್ನೂ ಊರಿನ ಜನ ತೀವ್ರವಾಗಿ ತೋರಿಸುತ್ತಿದ್ದರು. ನನ್ನ ಮಿತ್ರ ಹಾಗೂ ಮಂಜ, ನಾವೇ ಸಾಧ್ಯವಾದಷ್ಟು ಜಲಕಳೆಯನ್ನು ಕಿತ್ತೊಗೆಯುತ್ತೇವೆ ಅನ್ನುತ್ತ, ಶಾಲೆ ಬಿಡುತ್ತಲೇ ಕತ್ತಿ ಹಿಡಿದು ಹೊಳೆಯತ್ತ ಧಾವಿಸುತ್ತಿದ್ದರು. ಅದನ್ನು ನೋಡಿದ ಯಾರೋ ಹಿರಿಯರು, 'ಅಪ್ಪಿ ತಪ್ಪಿ ಹೊಳೆಯಲ್ಲಿ ಜಾರಿದರೆ, ಬಳ್ಳಿ ಕಾಲಿಗೆ ಸಿಕ್ಕಿ ಹಾಕಿಕೊಂಡು ನಿಮಗೆ ಕಾಲು ಬಡಿದು ಈಜಲೇ ಆಗುವುದಿಲ್ಲ. ಅದೇ ಆ ಬಳ್ಳಿಯ ವಿಶೇಷ' ಎಂದು ಎಚ್ಚರಿಸಿದ ಮೇಲೆ, ತಮ್ಮ ಕಳೆ ನಿರ್ಮೂಲನಾ ಸಾಹಸವನ್ನು ಕೈಬಿಟ್ಟಿದ್ದರು.



ಕಲೆ: ಬಾದಲ್

ಕಾಲಾಂತರದಲ್ಲಿ ನನ್ನ ಸ್ನೇಹಿತ, ಓದಿನ ಬೆನ್ನು ಹತ್ತಿ ಮಂಗಳೂರು, ನೌಕರಿಯ ಬೆನ್ನು ಹತ್ತಿ ಬೆಂಗಳೂರು ಸೇರಿದ ಮೇಲೆ ಆತನ ಹಾಗೂ ಮಂಜನ ಸಂಪರ್ಕ ಕಡಿದೇಹೋಯಿತು. 'ಯಾರನ್ನೋ ಹೊಳೆ ದಾಟಿಸುವಾಗ ತೆಪ್ಪ ಮುಳುಗಿ ಸತ್ತ, ನೆರೆ ಬಂದು ಆತನ ಮನೆಯೇ ಕೊಚ್ಚಿಹೋಯಿತು' – ಹೀಗೆ ಹತ್ತಾರು ಕಥೆಗಳು ಅವನ ನಾಪತ್ತೆಯ ಕಾರಣವನ್ನು ಹೇಳುತ್ತವೆ. ಆ ಕಥೆಯ ಬೆನ್ನು ಹತ್ತಿ ಹೋದಂತೆಲ್ಲ, ಆತ ಮೃತನಾಗಿರುವ ಸಾಧ್ಯತೆಗಳೇ ಗೋಚರಿಸುತ್ತವೆ. ಒಟ್ಟಾರೆ ಮಂಜನಿಲ್ಲದ ಕೊರಗು ಮಾತ್ರ ಶಾಶ್ವತವಾಗಿ ನನ್ನ ಗೆಳೆಯನಲ್ಲಿ ಉಳಿದು ಬಿಟ್ಟಿದೆ.

★★★

ರಾಷ್ಟ್ರೀಯ ಹೆದ್ದಾರಿ ಚತುಷ್ಪಥವಾದ ಮೇಲೆ ಹೊಳೆಗದ್ದೆಯಲ್ಲೀಗ ದೊಡ್ಡ ಸುಂಕ ವಸೂಲಾತಿ ಕೇಂದ್ರ ನಿರ್ಮಾಣವಾಗಿದೆ. ವಿಶಾಲ ಸಪಾಟು ಜಾಗದಲ್ಲಿ, ಟೋಲ್ ಬೂತುಗಳೂ ನೌಕರರ ಮನೆಗಳೂ ಕಚೇರಿಗಳೂ ಎದ್ದು ನಿಂತಿವೆ. ಸೇತುವೆ ಅಳಿದು ಮಟ್ಟಸ ರಸ್ತೆಯಾಗಿದೆ. ಅಲ್ಲಿ ಹೊಳೆಗಳಿದ್ದವು ಎಂಬುದಕ್ಕೆ ಯಾವುದೇ ಸಾಕ್ಷ್ಯ ಸಿಗುವುದಿಲ್ಲ. ಹಯಾಸಿಂಥ್ ಜಲಕಳೆಯ ಕುರುಹೂ ಇಲ್ಲ. ಎಲ್ಲ ವಾಹನಗಳೂ ಅಲ್ಲಿ ನಿಂತೇ ಸಾಗಬೇಕಾದ್ದರಿಂದ, ಸಾಲಲ್ಲಿ ಸಣ್ಣ ಪುಟ್ಟ ಅಂಗಡಿಗಳೂ ತೆರೆದುಕೊಂಡಿವೆ. ಅಲ್ಲಿಯದೇ ಒಂದು ಅಂಗಡಿಯಲ್ಲಿ ಚಹ ಹೀರುತ್ತ ನಿಂತಿದ್ದಾಗ ನನ್ನ ಮಿತ್ರನಿಗೆ ಮಂಜ ಕಾಣಿಸಿದನಂತೆ. ಆತನನ್ನು ನೋಡದೇ ಅದೆಷ್ಟೋ ವರ್ಷಗಳಾಗಿದ್ದರೂ,ತಲೆಗೊಂದು ಮುಂಡಾಸು ಸುತ್ತಿ, ಕೊಳಕಾದ ಮುಂಡನ್ನು ಎತ್ತಿ ಕಟ್ಟಿ, ಬರಿ ಮೈ, ಹೆಗಲ ಮೇಲೆ ಟವೆಲ್ಲು ಹಾಕಿದ್ದ ವ್ಯಕ್ತಿಯನ್ನು ನೋಡುತ್ತಲೇ ಆತ ಮಂಜನೇ ಇರಬಹುದು ಎನ್ನಿಸಿತಂತೆ.

'ಮಂಜನನ್ನು ನೋಡಿದಂತಿತ್ತು' ಎನ್ನುವ ಹೇಳಿಕೆ ಆತ ನೀಡುತ್ತಿರುವಂತೆ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಘಟನೆಯೊಂದು ನನ್ನ ನೆನಪಿಗೆ ಬಂತು. ಕಾದಂಬರಿಯ ಮುಖ್ಯ